ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 15-12-2003.

# *ತಂದೆಯನ್ನು ಪ್ರತ್ಯಕ್ಷ ಮಾಡುವುದಕ್ಕೋಸ್ಕರ ಸಾಧಾರಣತೆಯನ್ನು ಅಲೌಕಿಕತೆಯಲ್ಲಿ ಪರಿವರ್ತನೆ ಮಾಡಿಕೊಂಡು ದರ್ಶನೀಯ ಮೂರ್ತಿಗಳಾಗಿರಿ*

(प्रत्यक्षता के लिए साधारणता को अलौकिकता में परिवर्तन कर दर्शनीय मूर्त बनो)

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಬಾಪ್‌ದಾದಾ ತನ್ನ ಎಲ್ಲಾ ಕಡೆಯ ಬ್ರಾಹ್ಮಣ ಮಕ್ಕಳ ಮಸ್ತಕದ ಮಧ್ಯೆ ಭಾಗ್ಯದ ಮೂರು ನಕ್ಷತ್ರಗಳು ಹೊಳೆಯುತ್ತಿರುವುದನ್ನು ನೋಡುತ್ತಿದ್ದಾರೆ. ಇದು ಎಷ್ಟು ಶ್ರೇಷ್ಠ ಭಾಗ್ಯವಾಗಿದೆ! ಹಾಗೂ ಎಷ್ಟು ಸಹಜವಾಗಿ ಪ್ರಾಪ್ತಿಯಾಗಿದೆ! ಮೊದಲನೆಯದು - ಅಲೌಕಿಕ ಶ್ರೇಷ್ಠ ಜನ್ಮದ ಭಾಗ್ಯವಾಗಿದೆ, ಎರಡನೆಯದು - ಶ್ರೇಷ್ಠ ಸಂಬಂಧದ ಭಾಗ್ಯ, ಮೂರನೆಯದು - ಸರ್ವಪ್ರಾಪ್ತಿಗಳ ಭಾಗ್ಯವಾಗಿದೆ. ಹೊಳೆಯುತ್ತಿರುವ ಭಾಗ್ಯದ ಮೂರೂ ನಕ್ಷತ್ರಗಳನ್ನು ನೋಡಿ ಬಾಪ್‌ದಾದಾರವರೂ ಸಹ ಹರ್ಷಿತರಾಗುತ್ತಿದ್ದಾರೆ. ಜನ್ಮದ ಭಾಗ್ಯವನ್ನು ನೋಡಿ, ಸ್ವಯಂ ಭಾಗ್ಯವಿದಾತ ತಂದೆಯ ಮೂಲಕ ತಮ್ಮೆಲ್ಲರ ಜನ್ಮವಾಗಿದೆ. ಯಾವಾಗ ಜನ್ಮದಾತನೇ ಭಾಗ್ಯವಿದಾತನಾಗಿರುತ್ತಾರೆಯೋ ಆಗ ಜನ್ಮವೂ ಸಹ ಎಷ್ಟು ಆಲೌಕಿಕ ಮತ್ತು ಶ್ರೇಷ್ಠವಾಗಿದೆ! ತಮ್ಮೆಲ್ಲರಿಗೂ ಸಹ ತಮ್ಮ ಈ ಭಾಗ್ಯದ ಜನ್ಮದ ನಶೆ ಮತ್ತು ಖುಷಿಯಿದೆಯಲ್ಲವೆ! ಜೊತೆಜೊತೆಗೆ ಸಂಬಂಧದ ವಿಶೇಷತೆಯನ್ನು ನೋಡಿ - ಇಡೀ ಕಲ್ಪದಲ್ಲಿ ಇಂತಹ ಸಂಬಂಧವು ಬೇರೆ ಯಾವ ಆತ್ಮನಿಗೂ ಇಲ್ಲ. ತಾವು ವಿಶೇಷ ಆತ್ಮರಿಗೇ ಒಬ್ಬರ ಮೂಲಕ ಮೂರೂ ಸಂಬಂಧಗಳು ಪ್ರಾಪ್ತಿಯಾಗಿವೆ. ಒಬ್ಬರೇ ತಂದೆಯೂ ಆಗಿದ್ದಾರೆ, ಶಿಕ್ಷಕನೂ ಆಗಿದ್ದಾರೆ ಹಾಗೂ ಸದ್ಗುರುವೂ ಆಗಿದ್ದಾರೆ. ಹೀಗೆ ಒಬ್ಬರ ಮೂಲಕ ಮೂರು ಸಂಬಂಧಗಳು

ಬ್ರಾಹ್ಮಣ ಆತ್ಮರ ವಿನಃ ಬೇರೆ ಯಾರಿಗೂ ಇಲ್ಲ. ಅನುಭವವಿದೆಯಲ್ಲವೆ! ತಂದೆಯ ಸಂಬಂಧದಲ್ಲಿ ಆಸ್ತಿಯನ್ನೂ ಕೊಡುತ್ತಿದ್ದಾರೆ, ಪಾಲನೆಯನ್ನೂ ಮಾಡುತ್ತಿದ್ದಾರೆ. ಆಸ್ತಿಯೂ ಸಹ ಎಷ್ಟು ಶ್ರೇಷ್ಠ ಮತ್ತು ಅವಿನಾಶಿಯಾಗಿದೆ ನೋಡಿ! ನಮ್ಮ ಪಾಲನಾಕರ್ತ ಭಗವಂತನಾಗಿದ್ದಾರೆಂದು ಜಗತ್ತಿನ ಮನುಷ್ಯರು ಹೇಳುತ್ತಾರೆ. ಆದರೆ ತಾವು ಮಕ್ಕಳು ನಮ್ಮ ಪಾಲನಾಕರ್ತ ಸ್ವಯಂ ಭಗವಂತನಾಗಿದ್ದಾರೆ ಎಂಬ ಮಾತನ್ನು ನಿಶ್ಚಯ ಮತ್ತು ನಶೆಯಿಂದ ಹೇಳುತ್ತೀರಿ. ಇಂತಹ ಪಾಲನೆ, ಪರಮಾತ್ಮನ ಪಾಲನೆ, ಪರಮಾತ್ಮನ ಪ್ರೀತಿ, ಪರಮಾತ್ಮನ ಆಸ್ತಿ(ವಾರಸತ್ವ) ಯಾರಿಗೆ ಪ್ರಾಪ್ತಿಯಾಗಿದೆ! ಅಂದಾಗ ಒಬ್ಬರೇ ತಂದೆಯೂ ಆಗಿದ್ದಾರೆ, ಪಾಲನಾಕರ್ತನೂ ಆಗಿದ್ದಾರೆ, ಶಿಕ್ಷಕನೂ ಆಗಿದ್ದಾರೆ.

ಪ್ರತಿಯೊಂದು ಆತ್ಮನ ಜೀವನದಲ್ಲಿ ವಿಶೇಷವಾಗಿ ಮೂರು ಸಂಬಂಧಗಳು ಅವಶ್ಯಕವಾಗಿವೆ. ಆದರೆ ಮೂರು ಸಂಬಂಧಗಳೂ ಬೇರೆ- ಬೇರೆಯಾಗಿರುತ್ತವೆ. ಆದರೆ ತಮಗೆ ಒಬ್ಬರಲ್ಲಿಯೇ ಮೂರು ಸಂಬಂಧಗಳಿವೆ. ವಿದ್ಯೆಯನ್ನು ನೋಡಿ – ಮೂರು ಕಾಲಗಳ ವಿದ್ಯೆಯಾಗಿದೆ, ತ್ರಿಕಾಲದರ್ಶಿಗಳಾಗುವ ವಿದ್ಯೆಯಾಗಿದೆ. ವಿದ್ಯೆಯನ್ನು ಸೋರ್ಸ್ ಆಫ್ ಇನ್ಕಮ್ (ಸಂಪಾದನೆಗೆ ಮೂಲ) ಎಂದು ಹೇಳಲಾಗುತ್ತದೆ. ವಿದ್ಯೆಯಿಂದ ಪದವಿಯು ಪ್ರಾಪ್ತಿಯಾಗುತ್ತದೆ. ಇಡೀ ವಿಶ್ವದಲ್ಲಿ ನೋಡಿ ಎಲ್ಲರಿಗಿಂತ ಶ್ರೇಷ್ಠಾತಿ ಶ್ರೇಷ್ಠ ಪದವಿಯು ರಾಜ್ಯ ಪದವಿಯೆಂದು ಗಾಯನವಿದೆ ಅಂದಮೇಲೆ ತಮಗೆ ಈ ವಿದ್ಯೆಯಿಂದ ಯಾವ ಪದವಿಯು ಪ್ರಾಪ್ತಿಯಾಗುತ್ತದೆ? ಈಗಲೂ ರಾಜರು ಮತ್ತು ಭವಿಷ್ಯದಲ್ಲಿಯೂ ರಾಜ್ಯಪದವಿ. ಈಗ ಸ್ವರಾಜ್ಯವಿದೆ, ರಾಜಯೋಗಿ ಸ್ವರಾಜ್ಯಾಧಿಕಾರಿಗಳಾಗಿದ್ದೀರಿ ಮತ್ತು ಭವಿಷ್ಯದ ರಾಜ್ಯಭಾಗ್ಯವಂತೂ ಅವಿನಾಶಿಯಾಗಿದೆ. ಇದಕ್ಕಿಂತ ಶ್ರೇಷ್ಠ ಪದವಿ ಯಾವುದೂ ಇಲ್ಲ. ಶಿಕ್ಷಕನ ಮೂಲಕ ಶಿಕ್ಷಣವೂ ಸಹ ತ್ರಿಕಾಲದರ್ಶಿಯದಾಗಿದೆ ಮತ್ತು ಪದವಿಯೂ ದೈವೀ ರಾಜ್ಯಪದವಿಯಾಗಿದೆ. ಇಂತಹ ಶಿಕ್ಷಕನ ಸಂಬಂಧವು ಬ್ರಾಹ್ಮಣ ಜೀವನದ ವಿನಃ ಮತ್ಯಾರಿಗೂ ಇಲ್ಲ, ಇರಲು ಸಾಧ್ಯವೂ ಇಲ್ಲ. ಜೊತೆಯಲ್ಲಿ ಸದ್ಗುರುವಿನ ಸಂಬಂಧ, ಸದ್ಗುರುವಿನ ಮೂಲಕ ಶ್ರೀಮತ, ಯಾವ ಶ್ರೀಮತದ ಗಾಯನವು ಇಂದಿಗೂ ಸಹ ಭಕ್ತಿಯಲ್ಲಿ ನಡೆಯುತ್ತಿದೆ. ತಾವು ನಿಶ್ಚಯದಿಂದ ಹೇಳುತ್ತೀರಿ, ನಮ್ಮ ಪ್ರತೀ ಹೆಜ್ಜೆ ಯಾವ ಆಧಾರದಿಂದ ನಡೆಯುತ್ತದೆ? ಪ್ರತೀ ಹೆಜ್ಜೆಯು ಶ್ರೀಮತದ ಆಧಾರದ ಮೇಲೆ ನಡೆಯುತ್ತದೆ. ಅಂದಾಗ ಪರಿಶೀಲನೆ ಮಾಡಿಕೊಳ್ಳಿರಿ - ಪ್ರತೀ ಹೆಜ್ಜೆಯು ಶ್ರೀಮತದಂತೆ ನಡೆಯುತ್ತದೆಯೆ? ಭಾಗ್ಯವಂತೂ ಪ್ರಾಪ್ತಿಯಾಗಿದೆ ಆದರೆ ಜೀವನದಲ್ಲಿ ಆ ಭಾಗ್ಯದ ಪ್ರಾಪ್ತಿಯು ಅನುಭವವಾಗಿದೆಯೆ? ಪ್ರತೀ ಹೆಜ್ಜೆಯು ಶ್ರೀಮತದನುಸಾರವಿದೆಯೊ ಅಥವಾ ಕೆಲಕೆಲವೊಮ್ಮೆ ಮನ್ಮತವಿದೆಯೇ, ಪರಮತವಂತೂ ಬೆರೆಕೆಯಾಗುವುದಿಲ್ಲವೆ? ಇದರ ಗುರುತಾಗಿದೆ - ಒಂದುವೇಳೆ ಹೆಜ್ಜೆಯು ಶ್ರೀಮತದಂತಿದ್ದರೆ ಪ್ರತೀ ಹೆಜ್ಜೆಯಲ್ಲಿಯೂ ಪದಮಗಳ ಸಂಪಾದನೆಯು ಜಮಾ ಆಗುವ ಅನುಭವವಾಗುತ್ತದೆ. ಪ್ರತೀ ಹೆಜ್ಜೆಯು ಶ್ರೀಮತದನುಸಾರವಿದ್ದರೆ ಸಹಜವಾಗಿ ಸಫಲತೆಯು ಸಿಗುತ್ತದೆ. ಜೊತೆಜೊತೆಗೆ ಸದ್ಗುರುವಿನ ಮೂಲಕ ವರದಾನಗಳ ಖಜಾನೆ(ಗಣಿ) ಪ್ರಾಪ್ತಿಯಾಗಿದೆ. ವರದಾನವಿದೆ ಎನ್ನುವುದರ ಚಿಹ್ನೆ ಎಲ್ಲಿ ವರದಾನವಿರುವುದೋ ಅಲ್ಲಿ ಪರಿಶ್ರಮವೆನಿಸುವುದಿಲ್ಲ. ಅಂದಾಗ ಸದ್ಗುರುವಿನ ಸಂಬಂಧದಲ್ಲಿ ಶ್ರೇಷ್ಠಮತ ಮತ್ತು ಸದಾ ವರದಾನ ಪ್ರಾಪ್ತಿಯಾಗಿದೆ ಹಾಗೂ ವಿಶೇಷತೆಯು ಸಹಜ ಮಾರ್ಗದ್ದೇನಾಗಿದೆ ಎಂದರೆ, ಯಾವಾಗ ಒಬ್ಬರಲ್ಲಿಯೇ ಮೂರು ಸಂಬಂಧಗಳಿವೆ ಎಂದಮೇಲೆ ಒಬ್ಬರನ್ನು ನೆನಪು ಮಾಡುವುದು ಸಹಜ. ಮೂರು-ಸಂಬಂಧಗಳು ಬೇರೆ-ಬೇರೆಯಾಗಿ ನೆನಪು ಮಾಡುವ ಅವಶ್ಯಕತೆಯಿಲ್ಲ ಆದ್ದರಿಂದ ಒಬ್ಬ ತಂದೆಯ ವಿನಃ ಬೇರೆ ಯಾರೂ ಇಲ್ಲವೆಂದು ತಾವೆಲ್ಲರೂ ಹೇಳುತ್ತೀರಿ. ಇದು ಸಹಜವಾಗಿದೆ ಏಕೆಂದರೆ ಒಬ್ಬರಲ್ಲಿಯೇ ವಿಶೇಷ ಸಂಬಂಧಗಳು ಬಂದುಬಿಡುತ್ತವೆ

ಅಂದಮೇಲೆ ಭಾಗ್ಯದ ನಕ್ಷತ್ರಗಳಂತೂ ಹೊಳೆಯುತ್ತಿವೆ ಏಕೆಂದರೆ ತಂದೆಯ ಮೂಲಕ ಸರ್ವರಿಗೆ ಪ್ರಾಪ್ತಿಗಳು ಆಗಿಯೇ ಇವೆ.

ಮೂರನೆಯ ಭಾಗ್ಯದ ನಕ್ಷತ್ರವಾಗಿದೆ - ಸರ್ವಪ್ರಾಪ್ತಿಗಳು, ಬ್ರಾಹ್ಮಣರ ಖಜಾನೆಯಲ್ಲಿ ಯಾವುದೇ ಅಪ್ರಾಪ್ತ ವಸ್ತುವಿಲ್ಲವೆಂದು ಗಾಯನವಿದೆ ಆದ್ದರಿಂದ ತಮ್ಮ ಖಜಾನೆಗಳನ್ನೂ ನೆನಪು ಮಾಡಿಕೊಳ್ಳಿರಿ. ಇಂತಹ ಖಜಾನೆಗಳು ಅಥವಾ ಸರ್ವಪ್ರಾಪ್ತಿಗಳು ಮತ್ಯಾರ ಮೂಲಕವೂ ಪ್ರಾಪ್ತಿಯಾಗಲು ಸಾಧ್ಯವಿಲ್ಲ! ಹೃದಯದಿಂದ ನನ್ನ ಬಾಬಾ ಎಂದು ಹೇಳಿದಿರಿ, ಖಜಾನೆಗಳು ಹಾಜರಾಗಿಬಿಡುತ್ತವೆ, ಆದ್ದರಿಂದ ಇಷ್ಟೂ ಶ್ರೇಷ್ಠಭಾಗ್ಯ ಸ್ಮೃತಿಯಲ್ಲಿರಲಿ, ಇದರಲ್ಲಿ ನಂಬರ್‌ವಾರ್ ಇದ್ದೀರಿ. ಈಗ ಬಾಪ್‌ದಾದಾ ಇದನ್ನೇ ಬಯಸುತ್ತಾರೆ - ಪ್ರತಿಯೊಂದು ಮಗುವೂ ಸಹ ಕೋಟಿಯಲ್ಲಿಯೂ ಕೆಲವರಾಗಿದ್ದಾರೆ ಅಂದಮೇಲೆ ಎಲ್ಲಾ ಮಕ್ಕಳು ನಂಬರ್‌ವಾರ್ ಅಲ್ಲ, ನಂಬರ್‌ವನ್ ಆಗಬೇಕಾಗಿದೆ. ಅಂದಮೇಲೆ ತಮ್ಮೊಂದಿಗೆ ತಾವು ಕೇಳಿಕೊಳ್ಳಿ - ನಂಬರ್‌ವಾರ್ ನಲ್ಲಿದ್ದೀರಾ ಅಥವಾ ನಂಬರ್‌ವನ್ ಆಗಿದ್ದೀರಾ? ಏನಾಗಿದ್ದೀರಿ? ಶಿಕ್ಷಕಿ-ಸಹೋದರಿಯರು ನಂಬರ್‌ವನ್ ಆಗಿದ್ದೀರಾ ಅಥವಾ ನಂಬರ್‌ವಾರ್ ಆಗಿದ್ದೀರಾ? ಪಾಂಡವರು ನಂಬರ್‌ವನ್ ಆಗಿದ್ದೀರಾ ಅಥವಾ ನಂಬರ್‌ವಾರ್ ಆಗಿದ್ದೀರಾ? ಏನಾಗಿದ್ದೀರಿ? ಯಾರು ನಾನು ನಂಬರ್‌ವನ್ ಆಗಿದ್ದೇನೆ ಹಾಗೂ ಸದಾ ಆಗಿರುತ್ತೇನೆ ಎಂದು ತಿಳಿಯುತ್ತೀರೋ? ಇಂದು ನಂಬರ್‌ವನ್ ಮತ್ತೆ ನಾಳೆ ನಂಬರ್‌ವಾರ್ ನಲ್ಲಿ ಬಂದುಬಿಡುವುದಿಲ್ಲವೇ? ಯಾರು ಇಷ್ಟೊಂದು ನಿಶ್ಚಯ ಬುದ್ಧಿಯವರಿದ್ದಾರೆ - ನಾವು ಸದಾ ಹೇಗೆ ಬ್ರಹ್ಮಾ ತಂದೆಯು ನಂಬರ್‌ವನ್ ಆದರೋ ಹಾಗೆಯೇ ಅವರನ್ನು ಅನುಸರಿಸಿ ನಂಬರ್‌ವನ್ ಆಗುತ್ತೇವೆ ಮತ್ತು ಆಗಿರುತ್ತೇವೆ ಎನ್ನುವವರು ಕೈಯನ್ನು ಎತ್ತಿರಿ. ಸುಮ್ಮನೆ ಕೈ ಎತ್ತಿಬಿಡುವುದಲ್ಲ, ಯೋಚಿಸಿ ಕೈಯನ್ನು ಎತ್ತಿರಿ. ಪೂರ್ಣ ಕೈ ಎತ್ತಿ, ಅರ್ಧ ಕೈ ಎತ್ತಿದ್ದರೆ ಅವರು ಅರ್ಧವೇ. ಕೈಯನ್ನಂತೂ ಅನೇಕರು ಎತ್ತಿದ್ದೀರಿ. ನೋಡಿದಿರಾ, ದಾದಿ ನೋಡಿದಿರಾ, ಈಗ ನಂಬರ್‌ವನ್ ಆಗುವವರ ಲೆಕ್ಕವನ್ನು ತೆಗೆದುಕೊಳ್ಳಿ. ಜಾನಕಿ ದಾದಿಯವರು ಲೆಕ್ಕವನ್ನು ತೆಗೆದುಕೊಳ್ಳಿರಿ. ಡಬಲ್ ವಿದೇಶಿಯಾರು ಕೈಯನ್ನೆತ್ತಿದರು. ಎತ್ತಿರಿ ಆದರೆ ನಂಬರ್‌ವನ್ ಇದ್ದೀರಾ? ಕೈಯನ್ನೆತ್ತಿ ಬಾಪ್‌ದಾದಾರವರನ್ನಂತೂ ಖುಷಿಪಡಿಸಿದಿರಿ. ಶುಭಾಷಯಗಳು. ಒಳ್ಳೆಯದು - ಕೈಯನ್ನೆತ್ತುವುದರ ಅರ್ಥವೇ ಆಗಿದೆ - ತಮ್ಮ ಮೇಲೆ ತಮಗೆ ಧೈರ್ಯವಿದೆ ಮತ್ತು ಧೈರ್ಯವಿದ್ದರೆ ಬಾಪ್‌ದಾದಾರವರೂ ಸಹ ಸಹಯೋಗಿ ಆಗುತ್ತಾರೆ ಆದರೆ ಈಗ ಬಾಪ್‌ದಾದಾ ಏನನ್ನು ಬಯಸುತ್ತಾರೆ? ನಂಬರ್‌ವನ್ ಆಗಿದ್ದೀರಿ, ಇದಂತೂ ಖುಷಿಯ ಮಾತಾಗಿದೆ ಆದರೆ....... ಆದರೆ ತಿಳಿಸುವುದೇ ಅಥವಾ ಆದರೆ ಎನ್ನುವ ಶಬ್ದವು ಇಲ್ಲವೆ ಇಲ್ಲವೊ? ಬಾಪ್‌ದಾದಾರವರ ಬಳಿ ಆದರೆ ಎಂಬುದು ಇದೆ.

ಬಾಪ್‌ದಾದಾ ನೋಡಿದರು - ಮನಸ್ಸಿನಲ್ಲಿ ಸಮಾವೇಶವಂತೂ ಆಗಿದೆ ಆದರೆ ಮನಸ್ಸಿನವರೆಗಷ್ಟೇ ಇದೆ, ಚಹರೆ ಮತ್ತು ಚಲನೆಯವರೆಗೂ ಬಂದಿಲ್ಲ. ಈಗ ಬಾಪ್‌ದಾದಾ ತಮ್ಮ ನಂಬರ್‌ವನ್ ಸ್ಥಿತಿಯನ್ನು ಚಲನೆ ಮತ್ತು ಚಹರೆಯಲ್ಲಿ ನೋಡಲು ಬಯಸುತ್ತಾರೆ. ಈಗ ಸಮಯದನುಸಾರ ನಂಬರ್‌ವನ್ ಎಂದು ಹೇಳುವವರ ಚಲನೆಯಲ್ಲಿ ದರ್ಶನೀಯ ಮೂರ್ತಿಯೆಂದು ಕಂಡುಬರಬೇಕು. ಇವರು ದರ್ಶನೀಯ ಮೂರ್ತಿಗಳೆಂದು ತಮ್ಮ ಚಹರೆಯೇ ತಿಳಿಸುವಂತಿರಬೇಕು. ತಮ್ಮ ಜಡಚಿತ್ರಗಳು ಅಂತಿಮ ಜನ್ಮದವರೆಗೂ, ಅಂತಿಮ ಸಮಯದವರೆಗೂ ದರ್ಶನೀಯ ಮೂರ್ತಿಗಳಂತೆ ಅನುಭವವಾಗುತ್ತದೆ, ಚೈತನ್ಯದಲ್ಲಿಯೂ ಸಹ ಹೇಗೆ ಬ್ರಹ್ಮಾತಂದೆಯನ್ನೂ ನೋಡಿದಿರಿ, ಸಾಕಾರ

ಸ್ವರೂಪದಲ್ಲಿ ನೋಡಿದಿರಿ, ಸೂಕ್ಷ್ಮದೇವತೆಯಂತೂ ನಂತರ ಆದರು. ಆದರೆ ಸಾಕಾರ ಸ್ವರೂಪದಲ್ಲಿದ್ದರೂ ಸಹ ತಮ್ಮೆಲ್ಲರಿಗೆ ಹೇಗೆ ಕಾಣಿಸುತ್ತಿದ್ದರು? ಸಾಧಾರಣವಾಗಿ ಕಂಡುಬರುತ್ತಿದ್ದರೇ? ಅಂತಿಮ 84 ಜನ್ಮ, ಹಳೆಯ ಜನ್ಮ, 60 ವರ್ಷಗಳ ನಂತರದ ಆಯಸ್ಸು, ಆದರೂ ಸಹ ಆದಿಯಿಂದ ಅಂತ್ಯದವರೆಗೆ ದರ್ಶನೀಯ ಮೂರ್ತಿಯಾಗಿ ಎಲ್ಲರೂ ಅನುಭವ ಮಾಡಿದಿರಿ, ಮಾಡಿದಿರಲ್ಲವೆ? ಸಾಕಾರ ರೂಪದಲ್ಲಿ ಮಾಡಿದಿರಲ್ಲವೆ? ಹೀಗೆ ಯಾರು ನಂಬರ್‌ವನ್ ಎನ್ನುವುದಕ್ಕೆ ಕೈಯೆತ್ತಿದರೋ ಅವರ ಚಿತ್ರವನ್ನು ಟಿ.ವಿ.ಯಲ್ಲಿ ಸೆರೆ ಹಿಡಿದಿದ್ದೀರಲ್ಲವೆ. ಬಾಪ್‌ದಾದಾ ಅಂತಹವರ ಫೈಲ್ ಗಳನ್ನು ನೋಡುತ್ತಾರೆ. ಬಾಪ್‌ದಾದಾರವರ ಬಳಿ ಫೈಲಂತೂ ಇದೆಯಲ್ಲವೆ ಆದ್ದರಿಂದ ಈಗಿನಿಂದ ತಮ್ಮ ಪ್ರತಿಯೊಂದು ನಡವಳಿಕೆಯಿಂದ ಅನುಭವವಾಗಲಿ, ಕರ್ಮ ಸಾಧಾರಣವಾಗಿರಬಹುದು, ಯಾವುದೇ ಕೆಲಸ ಮಾಡುತ್ತಿರಬಹುದು, ಬ್ಯುಸಿನೆಸ್ (ವ್ಯವಹಾರ) ಮಾಡುತ್ತಿರಬಹುದು, ಚಿಕಿತ್ಸೆ ನೀಡುತ್ತಿರಬಹುದು, ನ್ಯಾಯ ತೀರ್ಮಾನಿಸುತ್ತಿರಬಹುದು, ಏನನ್ನೇ ಮಾಡುತ್ತಿರಿ ಆದರೆ ಯಾವ ಸ್ಥಾನದಲ್ಲಿ ತಾವು ಸಂಬಂಧ-ಸಂಪರ್ಕದಲ್ಲಿ ಬರುತ್ತೀರೋ ಅಥವಾ ಅಲ್ಲಿನವರು ತಮ್ಮ ಚಲನೆಯಿಂದ ಅಲ್ಲಿರುವವರು ಇವರು ಭಿನ್ನ(ಅತೀತ)ವಾಗಿದ್ದಾರೆ, ಆಲೌಕಿಕವಾಗಿದ್ದಾರೆ ಎಂದು ಅನುಭವವಾಗಬೇಕು. ಅಥವಾ ಇವರೂ ಸಹ ಸಾಧಾರಣವಾಗಿದ್ದಾರೆ, ಹೀಗೆ ಲೌಕಿಕದಲ್ಲಿಯೂ ಇರುತ್ತಾರೆಂದು ತಿಳಿಯುತ್ತಾರೆಯೆ? ಕೆಲಸದ ವಿಶೇಷತೆಯಲ್ಲ ಆದರೆ ಪ್ರತ್ಯಕ್ಷ ಜೀವನದ ವಿಶೇಷತೆಯಿರಬೇಕು. ಬಹಳ ಒಳ್ಳೆಯ ವ್ಯಾಪಾರಿಯಾಗಿದ್ದಾರೆ, ಬಹಳ ಒಳ್ಳೆಯ ತೀರ್ಮಾನ ಕೊಡುತ್ತಾರೆ ಅಥವಾ ಬಹಳ ಒಳ್ಳೆಯ ನಿರ್ದೇಶಕರಾಗಿದ್ದಾರೆ..... ಎಂದು ಹೇಳಿಸಿಕೊಳ್ಳುವವರಂತೂ ಅನೇಕರಿದ್ದಾರೆ. ಯಾವುದೇ ಒಂದು ಪುಸ್ತಕವು ಬಿಡುಗಡೆಯಾದರೆ ಅದರಲ್ಲಿ ವಿಶೇಷ ಆತ್ಮರ ಹೆಸರಿರುತ್ತದೆ ಮತ್ತು ಹೀಗೆ ಅನೇಕರಿರುತ್ತಾರೆ. ಇಂತಹವರು ಈ ವಿಶೇಷತೆಯನ್ನು ಮಾಡಿದರು ಅಥವಾ ಇಂತಹವರು ಹೀಗೆ ಮಾಡಿದರು ಎಂದು ಹೆಸರು ಬಂದುಬಿಡುತ್ತದೆ ಆದರೆ ಯಾರೆಲ್ಲರೂ ಕೈಯನ್ನೆತ್ತಿದ್ದಾರೆಯೋ ಎತ್ತುವುದಂತೂ ಎಲ್ಲರೂ ಎತ್ತಬೇಕು ಆದರೆ ಯಾರು ಕೈಯನ್ನೆತ್ತಿದ್ದೀರಿ ಹಾಗೂ ಎಲ್ಲರೂ ಎತ್ತಲೇಬೇಕು, ಅಂದಾಗ ತಮ್ಮ ಪ್ರತ್ಯಕ್ಷ ಚಲನೆಯಲ್ಲಿ ಆ ಪರಿವರ್ತನೆ ಕಂಡುಬರಲಿ. ಇಲ್ಲಿಯವರೆಗೆ ಈ ಶಬ್ಧವು ಹೊರಡಿಲ್ಲ. ಭಲೆ ಕಾರ್ಖಾನೆಯಲ್ಲಿ ಅಥವಾ ಇಲ್ಲಿಯೇ ಕೆಲಸ ಮಾಡುತ್ತೀರೆಂದರೆ ಇವರು ಸಾಧಾರಣ ಕರ್ಮ ಮಾಡುತ್ತಿದ್ದರೂ ಸಹ ದರ್ಶನೀಯ ಮೂರ್ತಿಗಳಾಗಿದ್ದಾರೆಂದು ಒಂದೊಂದು ಆತ್ಮನೂ ಹೇಳುವಂತಿರಬೇಕು. ಹೀಗೆ ಇರಲು ಸಾಧ್ಯವೇ? ಸಾಧ್ಯವೇ? ಮುಂದೆ ಕುಳಿತಿರುವವರು ಹೇಳಿ - ಇದು ಸಾಧ್ಯವೆ? ಈಗ ಫಲಿತಾಂಶದಲ್ಲಿ ಕಡಿಮೆ ಕೇಳಿಬರುತ್ತಿದೆ ಆದರೆ ಹೆಚ್ಚಿನ ಸಾಧಾರಣತೆಯು ಕಾಣಿಸುತ್ತಿದೆ. ಯಾವಾಗಲಾದರೂ, ಯಾವುದಾದರೂ ವಿಶೇಷ ಕಾರ್ಯವನ್ನು ಮಾಡುವಾಗ ಅದರ ಪ್ರತಿ ವಿಶೇಷ ಗಮನವನ್ನು ಕೊಡುತ್ತೀರಿ. ಆದ್ದರಿಂದ ಸರಿ ಎನ್ನುವಂತೆ ಕಾಣಿಸುತ್ತದೆ ಆದರೆ ತಮಗೆ ತಂದೆಯೊಂದಿಗೆ ಪ್ರೀತಿಯಿದೆ, ತಂದೆಯೊಂದಿಗೆ ಪ್ರೀತಿಯಿದೆಯೇ? ಎಷ್ಟು ಪರ್ಸೆಂಟ್ ಪ್ರೀತಿ ಇದೆ? ಟೀಚರ್ಸ್ ಕೈಯನ್ನೆತ್ತಿರಿ. ಬಹಳಷ್ಟು ಜನ ಟೀಚರ್ಸ್ ಬಂದುಬಿಟ್ಟಿದ್ದಾರೆ. ಹೇಳಿ, ಇದು ಸಾಧ್ಯವೆ? ಅಥವಾ ಕೆಲವೊಮ್ಮೆ ಸಾಧಾರಣ, ಕೆಲವೊಮ್ಮೆ ವಿಶೇಷವೋ? ಮುಖದಿಂದ ಬರುವ ಯಾವ ಶಬ್ದವಾದರೂ, ಯಾವ ಕಾರ್ಯವನ್ನು ಮಾಡುತ್ತಿದ್ದರೂ ಸಹ ಭಾಷೆಯೂ ಅಲೌಕಿಕವಾಗಿರಬೇಕು, ಸಾಧಾರಣ ಭಾಷೆಯಲ್ಲ.

ಈಗ ಬಾಪ್‌ದಾದಾರವರಿಗೆ ಎಲ್ಲಾ ಮಕ್ಕಳ ಪ್ರತಿ ಈ ಶ್ರೇಷ್ಠ ಆಸೆಯಿದೆ - ಇದರ ನಂತರ ತಂದೆಯ ಪ್ರತ್ಯಕ್ಷತೆಯಾಗುವುದು. ತಮ್ಮ ಕರ್ಮ, ಚಲನೆ, ಚಹರೆ ಸ್ವತಹವಾಗಿಯೇ ಸಿದ್ಧಮಾಡುವುದು, ಭಾಷಣದಿಂದ ಸಿದ್ಧವಾಗುವುದಿಲ್ಲ. ಭಾಷಣವಂತೂ ಒಂದು ಬಾಣವನ್ನು ಹೊಡೆಯುವುದಾಗಿದೆ. ಆದರೆ ಇವರನ್ನು ಈ ರೀತಿ

ಮಾಡುವವರು ಯಾರು! ಎಂಬುದರ ಮೂಲಕ ಪ್ರತ್ಯಕ್ಷತೆಯಾಗುವುದು. ನಿಮ್ಮನ್ನು ಹೀಗೆ ತಯಾರು ಮಾಡುವವರು ಯಾರೆಂದು ತಾವೇ ಹುಡುಕುತ್ತಾರೆ, ತಾವೇ ಕೇಳುತ್ತಾರೆ. ರಚನೆಯು ರಚಯಿತನನ್ನು ಪ್ರತ್ಯಕ್ಷ ಮಾಡುತ್ತದೆ.

ಈ ವರ್ಷ ಏನು ಮಾಡುತ್ತೀರಿ? ಗ್ರಾಮಸೇವೆ ಮಾಡಬೇಕು. ಎಂದು ದಾದಿಯಂತೂ ತಿಳಿಸಿದರು. ಭಲೆ ಅದನ್ನು ಮಾಡಿ ಆದರೆ ಬಾಪ್‌ದಾದಾರವರು ಈಗ ಈ ಪರಿವರ್ತನೆಯನ್ನು ನೋಡಲು ಬಯಸುತ್ತಾರೆ. ಒಂದು ವರ್ಷದಲ್ಲಿ ಪರಿವರ್ತನೆಯಾಗಲು ಸಾಧ್ಯವಿದೆಯೆ? ಒಂದು ವರ್ಷದಲ್ಲಿ? ನಂತರದ ಸೀಜನ್ ಯಾವಾಗ ಪ್ರಾರಂಭವಾಗುವುದೋ ಆಗ ಎಲ್ಲದರಲ್ಲಿಯೂ ಅಂತರವು ಕಂಡುಬರಬೇಕು, ಎಲ್ಲಾ ಸೇವಾಕೇಂದ್ರಗಳಿಂದ ಇದೇ ಮಹಾನ್ ಪರಿವರ್ತನೆಯ ಕೂಗು ಹೊರ ಹೊಮ್ಮಬೇಕು. ನಂತರ ಪರಿವರ್ತನೆ, ಪರಿವರ್ತನೆ....... ಎಂಬ ಗೀತೆಯನ್ನು ಹಾಡುತ್ತಾರೆ. ಸಾಧಾರಣ ಮಾತು ತಮ್ಮ ಭಾಗ್ಯದ ಮುಂದೆ ಸರಿಯೆನಿಸುವುದಿಲ್ಲ. ಇದಕ್ಕೆ ಕಾರಣವಾಗಿದೆ - ನಾನು, ಈ ನಾನು, ನನ್ನತನ, ನಾನು ಏನು ಯೋಚಿಸಿದೆನೊ, ಏನು ಹೇಳುತ್ತೇನೆಯೋ, ಏನು ಮಾಡುತ್ತೇನೆಯೋ ಅದೇ ಸರಿಯಾಗಿದೆ, ಈ ನನ್ನತನದ ಕಾರಣ ಅಭಿಮಾನವೂ ಬರುತ್ತದೆ, ಕ್ರೋಧವೂ ಬರುತ್ತದೆ. ಎರಡೂ ತನ್ನ ಕೆಲಸ ಮಾಡುತ್ತವೆ. ತಂದೆಯ ಪ್ರಸಾದವಾಗಿದೆ ಅಂದಮೇಲೆ ಇದರಲ್ಲಿ ನಾನು ಎಂಬ ಶಬ್ದವು ಎಲ್ಲಿಂದ ಬಂದಿತು! ಪ್ರಸಾದವನ್ನು ಯಾರಾದರೂ ನನ್ನತನದಲ್ಲಿ ತರಲು ಸಾಧ್ಯವೆ? ಒಂದುವೇಳೆ ಬುದ್ಧಿಯೂ ಇದೆ. ಕಲೆಯೂ ಇದೆ, ಯಾವುದಾದರೂ ವಿಶೇಷತೆಯೂ ಇದೆ ಆದರೆ ಬಾಪ್‌ದಾದಾರವರು ವಿಶೇಷತೆಗೆ, ಬುದ್ಧಿಗೆ ಪ್ರೋತ್ಸಾಹ ನೀಡುತ್ತಾರೆ ಆದರೆ ಅದರಲ್ಲಿ ನಾನು ಎಂಬುದನ್ನು ತರಬೇಡಿ, ಈ ನನ್ನತನವನ್ನು ಸಮಾಪ್ತಿ ಮಾಡಿಬಿಡಿ. ಇದು ಸೂಕ್ಷ್ಮವಾದ ನನ್ನತನವಾಗಿದೆ. ಈ ನನ್ನತನವು ದರ್ಶನೀಯಮೂರ್ತಿಯಾಗಲು ಬಿಡುವುದಿಲ್ಲ ಅಂದಾಗ ದಾದಿಯರು ಏನು ಹೇಳುತ್ತೀರಿ? ಪರಿವರ್ತನೆಯಾಗಲು ಸಾಧ್ಯವೇ? ಸಾಧ್ಯವೇ? ಮೂವರು ಪಾಂಡವರು ತಿಳಿಸಿ, ಮೂವರೂ ವಿಶೇಷ ಆತ್ಮರಾಗಿದ್ದೀರಲ್ಲವೆ! ಮೂವರೂ ತಿಳಿಸಿ, ಇದು ಸಾಧ್ಯವೆ? ಸಾಧ್ಯವೆ? ಒಳ್ಳೆಯದು- ಈಗ ಇದರ ಕಮ್ಯಾಂಡರ್ (ದಂಡಾಧಿಕಾರಿ) ಆಗಬೇಕು. ಅನ್ಯಮಾತುಗಳಲ್ಲಿ ಕಮ್ಯಾಂಡರ್ ಆಗಬಾರದು, ಪರಿವರ್ತನೆಯಲ್ಲಿ ಕಮ್ಯಾಂಡರ್ ಆಗಬೇಕು. ಮಧುಬನದವರು ಆಗುತ್ತೀರಾ? ಆಗುತ್ತೀರಾ? ಮಧುಬನದವರು ಕೈಯೆತ್ತಿ. ಒಳ್ಳೆಯದು- ಆಗುತ್ತೀರಾ? ಬಾಂಬೆಯವರು ಕೈಯೆತ್ತಿ, ಬಾಂಬೆಯವರು ಆಗುತ್ತೀರಾ? ಒಂದುವೇಳೆ ಆಗುತ್ತೇವೆ ಎನ್ನುವುದಾದರೆ ಕೈಯನ್ನು ಅಲುಗಾಡಿಸಿ. ಒಳ್ಳೆಯದು. ದೆಹಲಿಯವರು ಕೈಯೆತ್ತಿ. ಅಂದಾಗ ದೆಹಲಿಯವರು ಮಾಡುತ್ತೀರಾ? ಟೀಚರ್ಸ್ ತಿಳಿಸಿ. ನೋಡುತ್ತೇವೆ. ಪ್ರತೀ ತಿಂಗಳು ಬಾಪ್‌ದಾದಾ ರಿಪೋರ್ಟ್ ತೆಗೆದುಕೊಳ್ಳುತ್ತಾರೆ. ಸಾಹಸ(ಧೈರ್ಯ)ವಿದೆಯಲ್ಲವೆ? ಶುಭಾಷಯಗಳು.

ಒಳ್ಳೆಯದು. ಇಂಡೋರ್ನವರು ಕೈಯೆತ್ತಿ. ಇಂಡೋರ್ನವರದು ಸೇವೆಯ ಟರ್ನ್ ಆಗಿದೆ. ಅಂದಾಗ ಇಂಡೋರ್ನ ಟೀಚರ್ಸ್ ಕೈಯೆತ್ತಿರಿ. ಟೀಚರ್ಸ್ ಮಾಡುವಿರಾ? ಇಂಡೋರ್ನವರು ಮಾಡುತ್ತೀರಾ? ಕೈಯನ್ನು ಅಲುಗಾಡಿಸಿ. ಎಲ್ಲಾ ಕೈಗಳು ಆಡುತ್ತಿಲ್ಲ. ಮಾಡುತ್ತೀರಾ ಅಥವಾ ಮಾಡಿಸುತ್ತೀರಾ? ದಾದಿಯರೇ ನೋಡಿ. ಟಿ.ವಿ.ಯಲ್ಲಿ ನೋಡುತ್ತಿದ್ದಾರೆ. ಗುಜರಾತಿನವರು ಕೈಯೆತ್ತಿದ್ದಾರೆ. ಗುಜರಾತಿನವರು ಮಾಡುತ್ತೀರಾ? ಕೈ ಅಲುಗಾಡಿಸುವುದಂತೂ ಸಹಜವಾಗಿದೆ, ಆದರೆ ಈಗ ಮನಸ್ಸನ್ನು ಅಲುಗಾಡಿಸಬೇಕಾಗಿದೆ. ಏಕೆ ಇಷ್ಟೊಂದು ದುಃಖವನ್ನು ನೋಡಿ ದಯೆ ಬರುತ್ತಿಲ್ಲವೇ? ಈಗ ಪರಿವರ್ತನೆಯಾಗುವುದೆಂದರೆ ಒಳ್ಳೆಯದು. ಈಗ ಪ್ರತ್ಯಕ್ಷತೆಯ - ಯೋಜನೆಯು ಪ್ರಾಯೋಗಿಕ

ಜೀವನವಾಗಿದೆ. ಉಳಿದಂತೆ ಕಾರ್ಯಕ್ರಮಗಳನ್ನು ಮಾಡುತ್ತೀರಿ ಆದರೆ ಇದಂತೂ ಬ್ಯುಸಿಯಾಗಿರುವುದಕ್ಕೆ ಚೆನ್ನಾಗಿದೆ ಆದರೆ ಪ್ರತ್ಯಕ್ಷತೆಯಾಗುವುದು ತಮ್ಮ ಚಲನೆ ಮತ್ತು ಚಹರೆಯಿಂದ. ಮತ್ಯಾವುದಾದರೂ ಜೋನ್ ಉಳಿದುಕೊಂಡಿದಿಯೇ? ಯು.ಪಿ (ಉತ್ತರಪ್ರದೇಶ) ಯವರು ಕೈಯನ್ನೆತ್ತಿರಿ. ಯು.ಪಿ.ಯವರು ಕಡಿಮೆ ಜನರಿದ್ದಾರೆ. ಒಳ್ಳೆಯದು- ಯು.ಪಿ.ಯವರು ಮಾಡುತ್ತೀರಾ? ಮಹಾರಾಷ್ಟ್ರದವರು ಕೈಯನ್ನು ಎತ್ತಿರಿ. ಪೂರ್ಣ ಕೈಯೆತ್ತಿ. ಒಳ್ಳೆಯದು. ಮಹಾರಾಷ್ಟ್ರದವರು ಮಾಡುತ್ತೀರಾ? ಶುಭಾಷಯಗಳು. ರಾಜಸ್ಥಾನದವರು ಕೈಯನ್ನು ಎತ್ತಿರಿ. ಟೀಚರ್ಸ್ ಕೈ ಅಲುಗಾಡಿಸಿ. ಕರ್ನಾಟಕದವರು ಕೈ ಎತ್ತಿ. ಒಳ್ಳೆಯದು - ಕರ್ನಾಟಕದವರು ಮಾಡುತ್ತೀರಾ? ಆಂಧ್ರಪ್ರದೇಶದವರು ಕೈಯನ್ನು ಎತ್ತಿರಿ. ಇವರಂತೂ ಚರ್ಚೆ ಮಾಡಿದ್ದಾರೆ. ಡಬಲ್ ವಿದೇಶಿಯರು ಕೈಯನ್ನು ಎತ್ತಿರಿ. ಡಬಲ್ ವಿದೇಶಿಯರು ಮಾಡುತ್ತಾರೆ. ಈಗ ನೋಡಿ ಸಭೆಯ ಮಧ್ಯದಲ್ಲಿ ಹೇಳಿದ್ದಾರೆ. ಎಲ್ಲರೂ ಧೈರ್ಯವನ್ನು ಬಹಳ ಚೆನ್ನಾಗಿ ತೋರಿಸಿದ್ದೀರಿ ಇದಕ್ಕಾಗಿ ಪದಮದಷ್ಟು ಶುಭಾಷಯಗಳು. ಹೊರಗಡೆಯೂ ಕೇಳುತ್ತಿದ್ದಾರೆ, ತಮ್ಮ-ತಮ್ಮ ದೇಶಗಳಲ್ಲಿಯೂ ಕೇಳುತ್ತಿದ್ದಾರೆ. ಅವರೂ ಸಹ ಕೈಯನ್ನು ಎತ್ತುತ್ತಿದ್ದಾರೆ.

ಹಾಗೆಯೇ ನೋಡಿ ಯಾರು ಶ್ರೇಷ್ಠ ಆತ್ಮರಿರುತ್ತಾರೆಯೋ ಅವರ ಪ್ರತಿಯೊಂದು ವಚನಕ್ಕೆ ಸತ್ಯವಚನ ಎನ್ನಲಾಗುತ್ತದೆ. ಸತ್ಯವಚನ ಮಹಾರಾಜ್ ಎಂದು ಹೇಳುತ್ತಾರಲ್ಲವೇ ಅಂದಮೇಲೆ ತಾವು ಮಹಾ-ಮಹಾರಾಜರಾಗಿದ್ದೀರಿ. ತಮ್ಮೆಲ್ಲರ ಪ್ರತಿಯೊಂದು ವಚನವನ್ನು ಯಾರೇ ಕೇಳಿದರೂ ಸಹ ಅವರು ಸತ್ಯವಚನ ಎಂಬುದನ್ನು ಮನಸ್ಸಿನಲ್ಲಿ ಅನುಭವ ಮಾಡುತ್ತಾರೆ. ನಿಮ್ಮ ಮನಸ್ಸಿನಲ್ಲಿ ಬಹಳಷ್ಟು ತುಂಬಿದೆ, ಬಾಪ್‌ದಾದಾರವರ ಬಳಿ ಮನಸ್ಸನ್ನು ನೋಡುವ ಟಿ.ವಿ.ಯೂ ಸಹ ಇದೆ. ಇಲ್ಲಿ ಈ ಟಿ.ವಿ.ಯು ಹೊರಗಡೆಯ ಮುಖವನ್ನು ತೋರಿಸುತ್ತದೆಯಲ್ಲವೇ. ಆದರೆ ಬಾಪ್‌ದಾದಾರವರ ಬಳಿ ಪ್ರತಿಯೊಬ್ಬರ ಪ್ರತಿಯೊಂದು ಸಮಯದ ಮನಸ್ಸಿನ ಗತಿ (ವೇಗ) ಯ ಯಂತ್ರವಿದೆ ಅಂದಮೇಲೆ ಮನಸ್ಸಿನಲ್ಲಿ ಬಹಳಷ್ಟು ಕಾಣಿಸುತ್ತದೆ, ಯಾವಾಗ ಮನಸ್ಸಿನ ಟಿ.ವಿಯನ್ನು ನೋಡುತ್ತಾರೆಯೋ ಆಗ ಖುಷಿಯಾಗುತ್ತಾರೆ, ಬಹಳ ಖಜಾನೆ ಇದೆ, ಬಹಳ ಶಕ್ತಿಗಳೂ ಇವೆ ಆದರೆ ಕರ್ಮದಲ್ಲಿ ಯಥಾ ಶಕ್ತಿಯಾಗಿಬಿಡುತ್ತದೆ. ಈಗ ಕರ್ಮದತನಕ ತನ್ನಿ, ವಚನದ ತನಕ ತನ್ನಿ, ಚೆಹರೆಯತನಕ ತನ್ನಿ, ನಡವಳಿಕೆಯತನಕ ತನ್ನಿ. ಆಗ ಎಲ್ಲರೂ ಹೇಳುತ್ತಾರೆ. ತಮ್ಮ ಒಂದು ಗೀತೆ ಇದೆಯಲ್ಲವೇ, ಶಕ್ತಿಯರು ಬಂದರು..... ಎಲ್ಲರೂ ಶಿವಶಕ್ತಿಯರು. ಪಾಂಡವರೂ ಸಹ ಶಕ್ತಿಯರಾಗಿದ್ದೀರಿ. ನಂತರ ಶಕ್ತಿಯರು ಶಿವತಂದೆಯನ್ನು ಪ್ರತ್ಯಕ್ಷ ಮಾಡುತ್ತಾರೆ. ಈಗ ಚಿಕ್ಕ ಚಿಕ್ಕ ಆಟಪಾಟಗಳನ್ನು ನಿಲ್ಲಿಸಿ. ಈಗ ವಾನಪ್ರಸ್ಥ ಸ್ಥಿತಿಯನ್ನು ಇಮರ್ಜ್ ಮಾಡಿಕೊಳ್ಳಿ ಅಂದಮೇಲೆ ಬಾಪ್‌ದಾದಾ ಎಲ್ಲಾ ಮಕ್ಕಳನ್ನು, ಈ ಸಮಯದಲ್ಲಿ ಬಾಪ್‌ದಾದಾರವರ ಅಸೆಗಳನ್ನು ಪೂರ್ಣ ಮಾಡುವಂತಹ ಆಸೆಗಳ ನಕ್ಷತ್ರಗಳನ್ನು ನೋಡುತ್ತಿದ್ದಾರೆ. ಯಾವುದೇ ಮಾತು ಬರಲಿ, ಈ ಸ್ಲೋಗನ್ ನೆನಪು ಇಟ್ಟುಕೊಳ್ಳಬೇಕು - ಪರಿವರ್ತನೆ, ಪರಿವರ್ತನೆ, ಪರಿವರ್ತನೆ.

ಒಳ್ಳೆಯದು, ದಿಲ್ಲಿಯವರು ಬಹಳ ಒಳ್ಳೆಯ ಸೇವೆಯ ಪ್ರತ್ಯಕ್ಷತೆಯನ್ನು ತೋರಿಸಿದ್ದೀರಿ. ಬಾಪ್‌ದಾದಾ ಸೇವೆಗಾಗಿ ಯಾವ ಸಲಹೆನ್ನಾದರೆ ಹೇಳಿದ್ದರೂ ಆ ರೀತಿಯಾಗಿ ಸೇವೆಯನ್ನು ಮಾಡುತ್ತಿದ್ದೀರಿ. ಏಕೆಂದರೆ ಯಾರಾದರೆ ಸಂಬಂಧ ಸಂಪರ್ಕಗಳಲ್ಲಿ ಬರುತ್ತಿದ್ದೀರೋ ಅವರು ಇದೇ ಹೇಳುತ್ತಿದ್ದಾರೆ. ನಿಮ್ಮ ಕಾರ್ಯ ಚೆನ್ನಾಗಿದೆ ಆದರೆ ಪ್ರಚಾರ ಸರಿಯಾಗಿಲ್ಲ. ಗುಪ್ತವಾಗಿ ಇದ್ದೀರಿ. ಆದ್ದರಿಂದಲೇ ತಂದೆಯು ಸಹ ಪ್ರತ್ಯಕ್ಷವಾಗಿಲ್ಲ. ದಿಲ್ಲಿಯಲ್ಲಿ ಪ್ರಸಾರ ಮಾಧ್ಯಮದ

ಮೂಲಕ ಸೇವೆಯನ್ನು ಮಾಡಿದ್ದಾರೆ. ಅದರ ಮೂಲಕ ಪ್ರಚಾರ ಎಂಬುವುದು ಈಗ ಪ್ರಾರಂಭವಾಗಿದೆ. ಬ್ರಹ್ಮಕುಮಾರಿಯರು ದೊಡ್ಡ ಕಾರ್ಯಕ್ರಮವನ್ನು ಮಾಡಿದ್ದಾರೆ ಎಂದು ಚೆನ್ನಾಗಿ ಹೆಸರು ಬಂದಿದೆ. ಆದ್ದರಿಂದ ದಿಲ್ಲಿಯವರಿಗೆ ಶುಭಾಶಯಗಳು. ಯಾರಾದರೆ ದಿಲ್ಲಿಯಿಂದ ಬಂದಿದ್ದೀರೋ ಅವರು ಮುಂದಕ್ಕೆ ಬಂದು ಕೈಯನ್ನು ಎತ್ತಿರಿ. ಬಹಳ ದೊಡ್ಡ ಗ್ರೂಪ್ ಬಂದಿದ್ದಾರೆ (ಸುಮಾರು 900 ಜನ ದಿಲ್ಲಿಯಿಂದ ಬಂದಿದ್ದರು). ನೋಡಿ ಯಾರಾದರೆ ಸ್ಟೇಜ್ನ ಮೇಲೆ ಇದ್ದೀರೋ ಅವರನ್ನು ಬಾಪ್‌ದಾದಾ ನೋಡುತ್ತಿಲ್ಲ. ಎದುರಿಗೆ ಇರುವ ನಿಮ್ಮನ್ನೇ ಬಾಬಾ ನೋಡುತ್ತಿದ್ದಾರೆ. ಆದ್ದರಿಂದ ನಿಮ್ಮ ಹೆಸರನ್ನು ಎಲ್ಲರಿಗಿಂತಲೂ ಮುಂದೆ ಇರುವಂತೆ ಭಾವಿಸಿರಿ. ಸೇವೆಯಲ್ಲಿ ಬಾಪ್‌ದಾದಾ ನನಗೆ ಮೊದಲ ನಂಬರ್ ಎಂದು ಪ್ರತಿಯೊಬ್ಬರು ಭಾವಿಸಿರಿ. ಬಹಳ ಜನರು ಬಂದಿದ್ದೀರಲ್ಲವೇ? ಹಾಗೆಯೇ ಹಿಂದೆ ಇರುವವರು ನಾವು ಹಿಂದೆ ಇದ್ದೇವೆ ಎಂದು ಭಾವಿಸಬೇಡಿರಿ. ನೀವು ಎಲ್ಲರಿಗಿಂತಲೂ ಮುಂದೆಯೇ ಇದ್ದೀರಿ. ಟೀಚರ್ಸ್ ಯಾರಾದರೆ ಇದ್ದೀರೋ ಅವರೆಲ್ಲರಿಗೂ ಬಾಪ್‌ದಾದಾ ಹೆಸರು ಹೆಸರಿನಿಂದ ಪ್ರಿಯಸ್ಮೃತಿಗಳು ಮತ್ತು ಶುಭಾಶಯಗಳು, ಹೆಸರಿನ ಮಾಲೆಯನ್ನು ಸ್ಮರಿಸುತ್ತಿಲ್ಲ ಆದರೆ ಹೃದಯದಲ್ಲಿ ಬಾಪ್‌ದಾದಾ ಪ್ರತಿಯೊಬ್ಬರ ಮಾಲೆಯನ್ನು ಜಪಿಸುತ್ತಿದ್ದಾರೆ. ಆದ್ದರಿಂದ ನನ್ನ ಹೆಸರು ಹೇಳಲಿಲ್ಲ ಎಂದು ಯಾವಾಗಲೂ ಯೋಚಿಸಬೇಡರಿ. ಎಲ್ಲರ ಹೆಸರುಗಳು ಇರುತ್ತವೆ. ಇದು ಸಾಕಾರ ವತನವಲ್ಲವೇ? ಆದ್ದರಿಂದ ಸಾಕಾರದಲ್ಲಿ ಸಾಕಾರ ಪೂರ್ವಕವಾಗಿಯೇ ಮಾಡಬೇಕಾಗಿರುತ್ತದೆ ಅಲ್ಲವೇ. ಇಲ್ಲಿ ಎಷ್ಟು ಜನರನ್ನು ವೇದಿಕೆಯ ಮೇಲೆ ಹೇಗೆ ಕರೆಯುವುದು? ಸ್ಟೇಜ್ ಎಲ್ಲಾ ತುಂಬಿ ಹೋಗುತ್ತದೆ. ಹಿಂದೆ ಇರುವವರು ಕೈಯನ್ನು ಎತ್ತಿರಿ! ನೀವು ಬಾಪ್‌ದಾದಾರವರ ಹೃದಯದಲ್ಲಿದ್ದೀರಿ, ನೀವು ಸ್ಟೇಜ್ ನ ಮೇಲೆ ಇದ್ದೀರಿ. ಬಾಪ್‌ದಾದಾ ನಿಮ್ಮಲ್ಲಿ ಯಾವ ವಿಶೇಷತೆಯನ್ನು ನೋಡಿದ್ದಾರೆ? ಏಕತೆ. ನಿಮ್ಮ ಆಲೋಚನೆಯನ್ನು ಹೇಳುತ್ತೀರಿ. ಹಿಂತಿರುಗಿ ಏನು ಹೇಳಿದರೆ ಅದಕ್ಕೆ ಹಾಗೆಯೇ ಎನ್ನುತ್ತಾ ಏಕತೆಗೊಳಗಾಗಿ ಇದ್ದೀರಿ. ಈ ಏಕತೆಯೇ ಸಫಲತೆಯ ಸಾಧನವಾಗಿದೆ.

ನೀವು ಒಬ್ಬೊಬ್ಬರು ಸಫಲತೆಯ ನಕ್ಷತ್ರಗಳು. ಮುಖ್ಯವಾಗಿ ಹಿಂದೆ ಕುಳಿತಿರುವವರು ಒಬ್ಬೊಬ್ಬರು ತಂದೆಯ ಎದುರಿಗೆ ಇದ್ದೀರಿ. ಈಗ ಖುಷಿಯಾಗಿದೆಯೇ ಅಥವಾ ನನ್ನ ಹೆಸರು ಹೇಳಲಿಲ್ಲ ಎನ್ನುತ್ತೀರಾ? ಎಲ್ಲರೂ ಕಷ್ಟಪಟ್ಟಿದ್ದೀರಿ, ಚಿಕ್ಕ ಟೀಚರ್ಸ್ ಹೆಚ್ಚು ಶ್ರಮ ಪಟ್ಟಿದ್ದೀರಿ. ಅಣ್ಣಂದಿರು ಸಹ ಬಹಳಷ್ಟು ಶ್ರಮ ಮಾಡಿದ್ದಾರೆ. ಯಾರು ಯಾವ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರೋ ಅದನ್ನು ಸಫಲತಾ ಪೂರ್ವಕವಾಗಿ ನಿರ್ವಹಿಸಿದ್ದೀರಿ. ಆದ್ದರಿಂದಲೇ ದಿಲ್ಲಿ ಅಂದರೆ ಬಾಪ್‌ದಾದಾರವರ ದಿಲ್ (ಹೃದಯ) ಸರಿ, ಹಿಂದೆ ಇರುವವರು ಮುಂದಕ್ಕೆ ಬರುತ್ತೀರಾ ಅಥವಾ ಹಿಂದೆಯೇ ಇರುತ್ತೀರಾ? ನಿಮ್ಮನ್ನು ಕರೆಯಲಿಲ್ಲ ಎನ್ನುತ್ತಾ ಮತ್ತೆ ನಿಂದಿಸಬಾರದು. ಎಲ್ಲರೂ ಬಾಪ್‌ದಾದಾರವರ ನಯನಗಳಲ್ಲಿ ಇದ್ದೀರಿ. ಬಾಪ್‌ದಾದಾರವರ ಎದುರುಗಡೆ ಇದ್ದೀರಿ. ಚಿಕ್ಕ ಟೀಚರ್ಸ್ಗೆ ಡಬಲ್ ಶುಭಾಶಯಗಳ. ಇನ್ನು ಪಾಂಡವರಿಗೆ ಸದಾ ತಂದೆ ಜೊತೆಯೇ ಇರುತ್ತಾರೆ. ಸದಾ ಖುಷಿಯಿಂದ ಇರಿ. ಈಗ ವಿದೇಶಿಯರು ಅದ್ಭುತವನ್ನು ಮಾಡಬೇಕು. ವಿದೇಶದಲ್ಲಿ ಕಾರ್ಯಕ್ರಮವಾಗಬೇಕು. ಅದನ್ನು ಭಾರತ ದೇಶದಲ್ಲಿ ನೋಡಬೇಕು. ಒಂದೇ ಸ್ಥಾನದಲ್ಲಿ ಭೇಟಿ ಆಗದಿದ್ದರೂ ಪ್ರಸಾರ ಮಾಧ್ಯಮಗಳ ಮೂಲಕ ಪ್ರಭಾವ ಚೆನ್ನಾಗಿರಬೇಕು. ಲಕ್ಷಗಳ ಜನ ಅಲ್ಲಿ ಭೇಟಿ ಆಗಬೇಕು ಎಂದಲ್ಲ. ಪ್ರಸಾರ ಮಾಧ್ಯಮದಿಂದ ಅಲ್ಲಿಯ ಕಾರ್ಯಕ್ರಮ ಭಾರತ ದೇಶದಲ್ಲಿ ನೋಡಬೇಕು. ಆಗಲೇ ಕುಂಭಕರ್ಣರು ಎಚ್ಚರಗೊಳ್ಳುತ್ತಾರೆ. ಒಳ್ಳೆಯದು.

ಈಗ ಕಲ್ಕತ್ತಾದವರು ಸಹ ಪ್ರಿಯ ಸ್ಮೃತಿಗಳನ್ನು ಕಳುಹಿಸಿದ್ದಾರೆ. ಪ್ರತಿಯೊಂದು ಸ್ಥಾನಕ್ಕೆ ಅದರದೇ ಆದ ಪ್ರಭಾವವಿರುತ್ತದೆ. ದೆಹಲಿಯೆಲ್ಲಂತೂ ಅಂತರಾಷ್ಟ್ರೀಯ ಸಾಧನೆಗಳು ಇವೆ. ಕಲ್ಕತ್ತಾದಲ್ಲಿ ಇನ್ನೊಂದು ವಿಶೇಷತೆ ಇರುತ್ತದೆ. ಕಲ್ಕತ್ತಾ ಸಹ ಕಡಿಮೆ ಏನಲ್ಲ. ನೀವು ಮಾಡುವ ಪುರುಷಾರ್ಥಕ್ಕೆ ಪ್ರಾಲಬ್ಧವು ಲಭಿಸುತ್ತದೆ. ಸಫಲತೆಯು ನಿಮ್ಮ ಜನ್ಮ ಸಿದ್ಧ ಅಧಿಕಾರವಾಗಿದೆ. ಕಲ್ಕತ್ತಾದವರು ಸಹ ಧ್ವನಿಯನ್ನು ಬಹಳ ಚೆನ್ನಾಗಿ ವ್ಯಾಪಿಸುತ್ತಿದ್ದಾರೆ ಮತ್ತು ಮಾಡುತ್ತಾರೆ ಸಹ. ಆದ್ದರಿಂದ ಕಲ್ಕತ್ತಾದವರು ದಿಲ್ಲಿಗಿಂತ ಕಡಿಮೆಯಾದವರಲ್ಲ. ಅವರು ಸಹ ಮುಂದಕ್ಕೆ ಹೋಗುತ್ತಿದ್ದಾರೆ. ಪ್ರತಿಯೊಂದು ಸ್ಥಾನಕ್ಕೆ ಅದರದೇ ಆದ ರೂಪುರೇಖೆಗಳು ಇರುತ್ತವೆ. ಈಗ ಬಾಪ್‌ದಾದಾ ವಿದೇಶೀಯರಿಗೆ ಹೇಳುತ್ತಿದ್ದಾರೆ. ವಿದೇಶದಲ್ಲಿ ಕಾರ್ಯಕ್ರಮವಾಗಬೇಕು. ಭಾರತ ದೇಶದವರು ನೋಡಬೇಕು.

ಇಂಜಿನಿಯರ್, ಸೈಂಟಿಸ್ಟ್, ಸಹಜ ಸೇವಕರು, ಯುವಕರು, ಗ್ರಾಮದಲ್ಲಿ ಸೇವೆ ಮಾಡುವವರು ಮತ್ತು ನಿಮಿತ್ತ ರಾಜಸ್ಥಾನ್ ಅಕ್ಕಂದಿರು, ಅಣ್ಣಂದಿರು ಮೀಟಿಂಗಾಗಿ ಬಂದಿದ್ದಾರೆ. ಅವರೊಂದಿಗೆ ಅವ್ಯಕ್ತ ಬಾಪ್‌ದಾದಾರವರ ಸಂಭಾಷಣೆ - ಹೀಗೆ ವರ್ಗದವರಾಗಿ ಸೇವೆ ಮಾಡಿದಾಗ ಚೆನ್ನಾಗಿ ಫಲಿತಾಂಶ ಬರುತ್ತದೆ. ಏಕೆಂದರೆ ಪ್ರತಿಯೊಂದು ವರ್ಗದವರು ಶ್ರಮ ಪಡುತ್ತಿದ್ದಾರೆ. ಸಂಪರ್ಕವನ್ನು ಹೆಚ್ಚಿಸುತ್ತಿದ್ದಾರೆ.

ವೈದ್ಯ ವರ್ಗದವರು ಸಹ ಯೋಗದ ಮೂಲಕ ಹೃದಯ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಪ್ರತ್ಯಕ್ಷ ಮಾಡಿ ತೋರಿಸಿದ್ದಾರೆ. ಯೋಗದ ಮೂಲಕ ಹೃದಯ ಸರಿಯಾಗಿ ಕೆಲಸ ಮಾಡುತ್ತದೆ ಎಂಬ ಪ್ರತ್ಯಕ್ಷ ಪ್ರಮಾಣವನ್ನು ತೋರಿಸಿದ್ದಾರೆ. ತೋರಿಸಿದ್ದೀರಲ್ಲವೇ? ನೀವೆಲ್ಲರೂ ಸಹ ಕೇಳಿದ್ದೀರಲ್ಲವೇ? ಪ್ರಪಂಚದಲ್ಲಿರುವವರು ಸಹ ಇಂತಹ ಪ್ರತ್ಯಕ್ಷ ಪ್ರಮಾಣವನ್ನು ನೋಡಬೇಕೆಂದುಕೊಳ್ಳುತ್ತಿದ್ದಾರೆ. ಇದೇ ರೀತಿಯಾಗಿ ಉಳಿದ ವರ್ಗದವರು ಯಾರಾದರೆ ಬಂದಿದ್ದೀರೋ ಅವರೆಲ್ಲರೂ ಸಹ ಪ್ರಮಾಣವನ್ನು ತೋರಿಸಿದ್ದಾರೆ ತೋರಿಸಬೇಕು. ಕಾರ್ಯಕ್ರಮಗಳಂತೂ ಮಾಡುತ್ತಿದ್ದೀರಿ. ಆದರೆ ಈಗ ನೀವು ಯಾವ ಪ್ಲಾನನ್ನು ಮಾಡಬೇಕೆಂದರೆ ನೀವು ಮಾಡುವುದರ ಫಲಿತಾಂಶ ಎಲ್ಲರಿಗೂ ಕಾಣಿಸಬೇಕು. ಎಲ್ಲಾ ವರ್ಗದವರಿಗೆ ಬಾಪ್‌ದಾದಾ ಹೇಳುತ್ತಿದ್ದಾರೆ. ಈ ವಿಷಯ ತಲುಪಿದೆಯಲ್ಲವೇ? ಯೋಗದ ಮೂಲಕ ಹೃದಯದ ರೋಗಗಳು ಸರಿಪಡಿಸಲಾಗುತ್ತದೆ ಎಂಬ ಮಾತು ಸಹ ವ್ಯಾಪಿಸಿದೆ. ಪ್ರಾರಂಭವನ್ನಂತೂ ಮಾಡಿದ್ದೀರಿ ಆದರೆ ಈಗ ಇದನ್ನು ಇನ್ನಷ್ಟು ಹೆಚ್ಚಿಸಬೇಕು. ಡಾಕ್ಟರ್ ಗುಪ್ತ ಎಲ್ಲಿದ್ದಾರೆ? ಇದನ್ನು ಇನ್ನಷ್ಟು ವ್ಯಾಪಿಸಿರಿ. ಇದೇ ರೀತಿಯಾಗಿ ಪ್ರತಿಯೊಂದು ವರ್ಗದವರು ಪ್ರತ್ಯಕ್ಷ ಪ್ರಮಾಣವನ್ನು ತೋರಿಸಬೇಕು. ಧ್ವನಿಯನ್ನು ವ್ಯಾಪಿಸಿದ್ದೀರಿ, ಸಂಪರ್ಕಗಳನ್ನು ಹೆಚ್ಚಿಸಿದ್ದೀರಿ. ಇದಕ್ಕೆ ಬಾಪ್‌ದಾದಾರವರು ಸಹ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಶ್ರಮ ಪಡುತ್ತಿದ್ದೀರಿ, ಮತ್ತಷ್ಟು ಸಫಲತೆಯನ್ನೂ ಪಡೆಯುತ್ತಿದ್ದೀರಿ. ಪ್ರತ್ಯಕ್ಷ ವಿಷಯವನ್ನು ಕೇಳಿ ಇದು ಹೀಗೆ ಎಂದು ಅವರು ಅರ್ಥ ಮಾಡಿಕೊಳ್ಳಬೇಕು. ಯಾವ ವರ್ಗದವರಾದರೂ ಆಗಲಿ ಒಂದು ಚಿತ್ರವನ್ನು ತಯಾರು ಮಾಡಿರಿ. ಪ್ರತ್ಯಕ್ಷ ಉದಾಹರಣೆಯಾಗಿರಿ, ಯೋಗದ ಮೂಲಕ ಎಲ್ಲವೂ ಆಗುತ್ತವೆ ಎಂದು ಎಲ್ಲರ ಗಮನವನ್ನು ಯೋಗದ ಕಡೆಗೆ ತನ್ನಿರಿ. ಆಧ್ಯಾತ್ಮಿಕತೆಯ ಕಡೆಗೆ ತನ್ನಿರಿ. ವೈದ್ಯರಂಗದವರು ಸಹ ಇನ್ನೂ ಮುಂದೆ ಇತರ ವ್ಯಾಧಿಗಳನ್ನು ಸಹ ನಿರ್ಮೂಲನೆ ಮಾಡಬಲ್ಲರು. ಸ್ವಲ್ಪ ಸ್ವಲ್ಪ ಪ್ರಯತ್ನ ಮಾಡುತ್ತಾ ಇದ್ದರೆ ಧ್ವನಿ ವ್ಯಾಪಿಸುತ್ತಾ ಇರುತ್ತದೆ. ಪರಮಾತ್ಮನ ಆಶೀರ್ವಾದವೂ ಸಹ ಎಲ್ಲಾ ಮಾಡಬಲ್ಲದು ಎಂಬ ಮಾತನ್ನು ಪ್ರತ್ಯಕ್ಷ ಮಾಡಿರಿ. ಒಳ್ಳೆಯದು. ಬಹಳ ಚೆನ್ನಾಗಿ ಮಾಡಿದ್ದೀರಿ.

**ನಾಲ್ಕೂ ಕಡೆಯ ಬಹಳ-ಬಹಳ-ಬಹಳ ಭಾಗ್ಯವಂತ ಆತ್ಮರಿಗೆ, ಇಡೀ ವಿಶ್ವದ ಮಧ್ಯೆ ಕೋಟಿಯಲ್ಲಿ ಕೆಲವರು, ಕೆಲವರಲ್ಲಿಯೂ ಕೆಲವು ವಿಶೇಷ ಆತ್ಮರಿಗೆ, ಸದಾ ತಮ್ಮ ಚಲನೆ ಹಾಗೂ ಚಹರೆಯ ಮೂಲಕ ಬಾಪ್‌ದಾದಾರವರನ್ನು ಪ್ರತ್ಯಕ್ಷ ಮಾಡುವಂತಹ ವಿಶೇಷ ಮಕ್ಕಳಿಗೆ, ಸದಾ ಸಹಯೋಗ ಹಾಗೂ ಸ್ನೇಹದ ಬಂಧನದಲ್ಲಿ ಇರುವಂತಹ ಶ್ರೇಷ್ಠ ಆತ್ಮರಿಗೆ, ಸದಾ ಬ್ರಹ್ಮಾತಂದೆಯ ಸಮಾನ ಪ್ರತಿಯೊಂದು ಕರ್ಮದಲ್ಲಿ ಅಲೌಕಿಕ ಕರ್ಮ ಮಾಡುವಂತಹ ಅಲೌಕಿಕ ಆತ್ಮರಿಗೆ, ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ರಿವೈಸ್ ಕೋರ್ಸ್ 15-12-2003.**
***ತಂದೆಯನ್ನು ಪ್ರತ್ಯಕ್ಷ ಮಾಡುವುದಕ್ಕೋಸ್ಕರ ಸಾಧಾರಣತೆಯನ್ನು ಅಲೌಕಿಕತೆಯಲ್ಲಿ ಪರಿವರ್ತನೆ ಮಾಡಿಕೊಂಡು ದರ್ಶನೀಯ ಮೂರ್ತಿಗಳಾಗಿರಿ.***

ವಿದ್ಯೆಯನ್ನು ಸೋರ್ಸ್ ಆಫ್ ಇನ್ಕಮ್ (ಸಂಪಾದನೆಯ ಮೂಲ) ಎಂದು ಕರೆಯಲಾಗುತ್ತದೆ. ನಮ್ಮ ಪ್ರತಿಯೊಂದು ಹೆಜ್ಜೆ ಶ್ರೀಮತದ ಆಧಾರದ ಮೇಲೆ ನಡೆಯುತ್ತಿದೆ ಎಂಬುದಕ್ಕೆ ಪರಿಶೀಲನೆ ಏನೆಂದರೆ ಪ್ರತಿ ಹೆಜ್ಜೆಯಲ್ಲಿ ಪದಮಾ ಪದಂ ಸಂಪಾದನೆ ಜಮಾ ಆಗಿರುವಂತೆ ಅನುಭವವಾಗುತ್ತದೆ. ನಮ್ಮ ಹೆಜ್ಜೆ ಶ್ರೀಮತದ ಆಧಾರವಾಗಿದ್ದರೆ ಸಹಜವಾಗಿ ಸಫಲತೆ ಬರುತ್ತದೆ.  ವರದಾನಕ್ಕೆ ಪರಿಶೀಲನೆ ಏನೆಂದರೆ ಎಲ್ಲಿ ವರದಾನವಿರುತ್ತದೆಯೋ ಅಲ್ಲಿ ಶ್ರಮ ಎಂಬುವುದು ಇರುವುದಿಲ್ಲ. ಇತರ ವಿಷಯಗಳಲ್ಲಿ ಕಮ್ಯಾಂಡರ್ ಆಗಬಾರದು. ಪರಿವರ್ತನೆಯಲ್ಲಿ ಕಮ್ಯಾಂಡರ್ ಆಗಬೇಕು. ಯಾವ ವಿಷಯ ಬಂದರೂ ಇದೇ ಸೂಕ್ತಿಯನ್ನು ನೆನಪಿಟ್ಟುಕೊಳ್ಳಬೇಕು. ಪರಿವರ್ತನೆ, ಪರಿವರ್ತನೆ, ಪರಿವರ್ತನೆ. ನೀವು ಮಾಡುವ ಪುರುಷಾರ್ಥಕ್ಕೆ ಪ್ರಾಲಬ್ಧ ಲಭಿಸುತ್ತದೆ. ಸಫಲತೆ ಎಂಬುವುದು ನಿಮ್ಮ ಜನ್ಮ ಸಿದ್ಧ ಅಧಿಕಾರ. ಈಗ ಏನು ಪ್ಲಾನ್ ಮಾಡಬೇಕೆಂದರೆ ನೀವು ಮಾಡುವುದರ ಫಲಿತಾಂಶವು ಎಲ್ಲರಿಗೂ ಕಾಣಿಸಬೇಕು. ಸ್ವಲ್ಪ ಸ್ವಲ್ಪ ಪ್ರಯತ್ನ ಮಾಡುತ್ತಾ ಇದ್ದರೆ ಧ್ವನಿ ವ್ಯಾಪಿಸುತ್ತಾ ಇರುತ್ತದೆ. ಪರಮಾತ್ಮನ ಆಶೀರ್ವಾದವು ಎಲ್ಲಾ ಮಾಡಬಲ್ಲದು ಎಂಬ ಮಾತನ್ನು ಪ್ರತ್ಯಕ್ಷ ಮಾಡಿರಿ. ಎನ್ನುತ್ತಾ ಬಾಪ್‌ದಾದಾ ತನ್ನ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**
ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನಗೆ ಭಾಗ್ಯವಿಧಾತ ಬಾಬಾನ ಮೂಲಕ ಅಲೌಕಿಕ ಶ್ರೇಷ್ಠ ಜನ್ಮ, ಶ್ರೇಷ್ಠ ಸಂಬಂಧ, ಸರ್ವಪ್ರಾಪ್ತಿಗಳ ಭಾಗ್ಯವು ಲಭಿಸಿವೆ.

2. ನನಗೆ ತಂದೆಯ ಸಂಬಂಧದಿಂದ ವಾರಸತ್ವ ಮತ್ತು ಪಾಲನೆ, ಶಿಕ್ಷಕನ ಸಂಬಂಧದಿಂದ ತ್ರಿಕಾಲ ದರ್ಶಿಯಾಗುವ ಶಿಕ್ಷಣ ಮತ್ತು ದೈವಿರಾಜ್ಯ ಪದವಿ, ಸದ್ಗುರುವಿನ ಸಂಬಂಧದ ಮೂಲಕ ಶ್ರೀಮತದ ಆಧಾರವಾಗಿ ಪ್ರತಿ ಹೆಜ್ಜೆಯಲ್ಲಿ ಪಧಮಾ ಪದದಷ್ಟು ಸಂಪಾದನೆ, ಸಹಜವಾಗಿ ಸಫಲತೆ ಜೊತೆ ಜೊತೆ ವರದಾನಗಳ ಖಜಾನೆ ಲಭಿಸಿದೆ.

3. ನಾನು ಹೃದಯದಿಂದ ನನ್ನ ಬಾಬಾ ಎಂದಾಕ್ಷಣ ಖಜಾನೆಯು ಹಾಜರಾಗಿ ಬಿಟ್ಟಿದೆ.

4. ನಾನು ಬ್ರಹ್ಮಾತಂದೆಯ ಸಮಾನವಾಗಿ ನಂಬರ್‌ವನ್ನಾಗಿ ನನ್ನ ಚಲನೆ (ವ್ಯಾಪಾರ, ವೈದ್ಯರಂಗ, ಉದ್ಯೋಗ ಯಾವ ಕರ್ಮವನ್ನು ಮಾಡುತ್ತಿದ್ದರೂ) ಮತ್ತು ಚಹರೆಯ ಮೂಲಕ ಸಾಧಾರಣತೆಯನ್ನು ಅಲೌಕಿಕತೆಯಲ್ಲಿ ಪರಿವರ್ತನೆ ಮಾಡುವ ದರ್ಶನೀಯಮೂರ್ತಿ.

5. ಯಾವ ಕಾರ್ಯವನ್ನು ಮಾಡುತ್ತಿದ್ದರೂ ನನ್ನ ಭಾಷೆಯು ಅಲೌಕಿಕವಾಗಿದೆ.

6. ರಚನೆಯಾದ ನಾನು ನನ್ನ ಕರ್ಮ ನಡವಳಿಕೆ(ಚಲನೆ), ಮುಖ(ಚಹರೆ), ಕರ್ಮ(ಪ್ರತ್ಯಕ್ಷ ಜೀವನ)ದ ಮೂಲಕ ರಚಯಿತನಾದ ತಂದೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.

7. ನಾನು ಅಭಿಮಾನ(ನನ್ನದು) ಎಂಬ ಭಾವನೆಯನ್ನು ಸಮಾಪ್ತಿ ಮಾಡಿ ನನ್ನ ವಿಶೇಷತೆ ಅಥವಾ ಬುದ್ಧಿಯನ್ನು ತಂದೆಯ ಪ್ರಸಾದವಾಗಿ ಭಾವಿಸಿ, ದರ್ಶನೀಯ ಮೂರ್ತಿ ಆಗಿದ್ದೇನೆ.

8. ನನ್ನ ಮಾತು ಯಾರಾದರೆ ಕೇಳುತ್ತಾರೆಯೋ ಅವರಿಗೆ ಇದೇ ಸತ್ಯ ಎಂದು ಅನುಭವವಾಗುವ ಮಹಾ ಮಹಾರಾಜನು.

9. ನಾನು ಸರ್ವ ಖಜಾನೆಗಳನ್ನು, ಶಕ್ತಿಗಳನ್ನು ಕರ್ಮ ನಡವಳಿಕೆಯವರೆಗೂ ತರುವ ಶಿವಶಕ್ತಿ ಸ್ವರೂಪ.

10. ನಾನು ಬಾಪ್‌ದಾದಾರವರ ಆಸೆಗಳನ್ನು ಪೂರ್ತಿ ಮಾಡುವ ಆಶಾ ನಕ್ಷತ್ರ.

11. ಯಾವ ವಿಷಯ ಬಂದರೂ ನಾನು ಪರಿವರ್ತನೆ, ಪರಿವರ್ತನೆ, ಪರಿವರ್ತನೆ ಎಂಬ ಸೂಕ್ತಿಯನ್ನು ನೆನಪಿಟ್ಟುಕೊಂಡಿದ್ದೇನೆ.

12. ನಾನು ಸಫಲತಾ ನಕ್ಷತ್ರ.

13. ನಾನು ಯೋಗದೊಂದಿಗೆ (ಯೋಗದ ಮೂಲಕ ಎಲ್ಲವೂ ಆಗುತ್ತವೆ.) ಪರಮಾತ್ಮನ ಆಶೀರ್ವಾದವೂ ಸಹ ಎಲ್ಲವನ್ನು ಮಾಡಬಲ್ಲದು ಎಂಬ ಮಾತನ್ನು ಪ್ರತ್ಯಕ್ಷ ಮಾಡಿದ್ದೇನೆ.